ಇ) ಈ ಕಟ್ಟಡಗಳ ಪುನರ್ ನಿರ್ಮಾಣಕ್ಕೆ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು; ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು):

ಅ) ಬೀಳಗಿ ತಾಲ್ಲೂಕು ಸುಮಾರು 20 ಪುನರ್ವಸತಿ ಕೇಂದ್ರಗಳಲ್ಲಿ ದೊಡ್ಡ ದೊಡ್ಡ ಶಾಲಾ ಕಟ್ಟಡಗಳನ್ನು ಕಟ್ಟಿದ್ದು ಅವು ಭದ್ರವಾಗಿವೆ, ಅಲ್ಲಿ ಯಾವ ಸೋರುವಿಕೆ ಇರುವುದಿಲ್ಲ. ಆದರೆ ಸೊನ್ನ ಗ್ರಾಮದಲ್ಲಿ ಕರ್ನಾಟಕ ಭೂಸೇನಾ ನಿಗಮದಿಂದ 2002 ರಲ್ಲಿ ಕಟ್ಟಿದ ಹೆಣ್ಣು ಮಕ್ಕಳ ಶಾಲೆ ಪೌಂಡೇಶನ್ ತಾಂತ್ರಿಕ ದೋಷದಿಂದ ಬಿರುಕು ಬಿಟ್ಟಿರುತ್ತದೆ. ಅದನ್ನು ಕೆಡವಿ ಹೊಸ ಕಟ್ಟಡ ಕಟ್ಟಲು ಕ್ರಮ ತೆಗೆದುಕೊಳ್ಳಲಾಗಿದೆ.

ಯತ್ನಟ್ಟಿ ಬಾದರದಿನ್ನಿ ಪುನರ್ವಸತಿ ಕೇಂದ್ರದಲ್ಲಿ ಶಾಲಾ ಕಟ್ಟಡವನ್ನು 1983–84ನೇ ಸಾಲಿನಲ್ಲಿ ಅಂದರೆ ಸುಮಾರು 22 ವರ್ಷಗಳ ಹಿಂದೆ ಭಾರಿ ನೀರಾವರಿ ಇಲಾಖೆಯ ವತಿಯಿಂದ ನಿರ್ಮಿಸಿದ್ದು, ಅದು ಶಿಥಿಲಗೊಂಡಿರುವುದರಿಂದ ಅದರ ಬದಲಿಗೆ ಬೇರೆ ಶಾಲಾ ಕಟ್ಟಡವನ್ನು ನಿರ್ಮಿಸಿದ್ದು ಕಳೆದ 4 ವರ್ಷಗಳಿಂದ ಅದರಲ್ಲಿ ಶಾಲೆಯು ಕಾರ್ಯ ನಿರ್ವಹಿಸುತ್ತಿರುತ್ತದೆ.

ಆ) ಸೊನ್ನ ಪುನರ್ವಸತಿ ಕೇಂದ್ರದಲ್ಲಿ ಶಿಥಿಲಗೊಂಡಿರುವ ಶಾಲಾ ಕಟ್ಟಡವನ್ನು ಕರ್ನಾಟಕ ಭೂಸೇನಾ ನಿಗಮ, ನಿರ್ಮಿಸಿದ್ದರಿಂದ ಅದಕ್ಕೆ ನಿಗಮವನ್ನು ಹೊಣೆಗಾರರನ್ನಾಗಿ ಮಾಡಿ ಶಾಲಾ ಕಟ್ಟಡದ ಪುನರ್ ನಿರ್ಮಾಣದ ಅಂದಾಜು ಮೊಬಲಗು ರೂ.27.00 ಲಕ್ಷಗಳನ್ನು ನಿಗಮದಿಂದ ಮರು ಪಾವತಿಸುವ ವಿಷಯ ಪರಿಶೀಲನೆಯಲ್ಲಿದೆ.

ಇ) ಸೊನ್ನ ಪುನರ್ ವಸತಿ ಕೇಂದ್ರದಲ್ಲಿ ಶಾಲಾ ಕಟ್ಟಡ ಪುನರ್ ನಿರ್ಮಾಣ ಮಾಡಲು ಕ್ರಮ ಜರುಗಿಸಲಾಗಿರುತ್ತದೆ.

4824(5417) ಶ್ರೀ ನಿರ್ಮಲ್ ಸುರಾನ (ಭಾರತೀನಗರ): ಮಾನ್ಯ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭಾರತೀನಗರ ವಿಧಾನಸಭಾ ವ್ಯಾಪ್ತಿಯ ಕೊಳಚೆ ಪ್ರದೇಶಗಳಲ್ಲಿ ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದ ದುರ್ಬಲ ವರ್ಗಗಳು ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕೊಳಚೆ ಪ್ರದೇಶದ ಆರ್ಥಿಕ ದುರ್ಬಲ ವರ್ಗಗಳ ಯುವ ಪ್ರತಿಭೆಗಳಲ್ಲಿ ಕ್ರೀಡಾ ಮನೋಭಾವ ಹುಟ್ಟು ಹಾಕಲು ಸರ್ಕಾರ

ರೂಪಿಸಿಕೊಂಡಿರುವ ಯೋಜನೆಗಳ ವಿವರವನ್ನು ನೀಡುವುದು; (ಕ್ಷೇತ್ರವಾರು, ತಾಲ್ಲೂಕುವಾರು ಹಾಗೂ ವಾರ್ಡ್‌ವಾರು);

ಇ) ಕೊಳಚೆ ಪ್ರದೇಶದ ಆರ್ಥಿಕ ದುರ್ಬಲ ವರ್ಗದ ಎಷ್ಟು ಯುವ ಪ್ರತಿಭೆಗಳನ್ನು ಸರ್ಕಾರ ಪ್ರೋತ್ಸಾಹಿಸಿದೆ ಮತ್ತು ಯಾವ ಯಾವ ರಂಗದಲ್ಲಿ;

ಈ) ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಇವರಿಗೆ ಅವಕಾಶ ಕಲ್ಪಿಸಲಾಗಿದೆಯೇ ಎಂಬುದರ ವಿವರ ನೀಡುವುದು;

ಉ) ಕ್ರೀಡಾ ಪ್ರತಿಭೆಗಳಿಗೆ ಸರ್ಕಾರದ ವತಿಯಿಂದ ನೀಡಿರುವ ಪ್ರೋತ್ಸಾಹ ಹಾಗೂ ಸಹಾಯ ಧನದ ಬಗ್ಗೆ ಕ್ಷೇತ್ರವಾರು, ತಾಲ್ಲೂಕುವಾರು ಮತ್ತು ವಾರ್ಡ್‌ವಾರು ವಿವರಗಳನ್ನು ನೀಡಲಾಗುವುದೇ?

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಸಚಿವರು):

ಅ) ಮತ್ತು ಆ) ಕೊಳಚೆ ಪ್ರದೇಶದ ಆರ್ಥಿಕ ದುರ್ಬಲ ವರ್ಗಗಳ ಯುವ ಪ್ರತಿಭೆಗಳಲ್ಲಿ ಕ್ರೀಡಾ ಮನೋಭಾವ ಹುಟ್ಟುಹಾಕಲು ಯಾವುದೇ ನಿರ್ದಿಷ್ಟ ಯೋಜನೆ ರೂಪಿಸಿಲ್ಲವಾದರೂ ಯುವಜನಸೇವಾ ಇಲಾಖೆಯ ವತಿಯಿಂದ ಕೊಳಚೆ ಪ್ರದೇಶದಲ್ಲಿರುವ ಯುವಕರಿಗೆ " ಫುಟ್ ಬಾಲ್" ಕ್ರೀಡೆಯಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ.

ಇ) ಮತ್ತು ಈ) ಕೊಳಚೆ ಪ್ರದೇಶದ ಆರ್ಥಿಕ ದುರ್ಬಲ ವರ್ಗದ 20 ಮಂದಿ ಪ್ರತಿಭೆಗಳನ್ನು ಗುರ್ತಿಸಿದೆ. ಗ್ರಾಮೀಣ ಕ್ರೀಡಾಕೂಟ, ಮಹಿಳಾ ಕ್ರೀಡಾಕೂಟ, ಯುವಜನೋತ್ಸವ, ಸಾಹಸ ಕ್ರೀಡೆಗಳಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾ ಪಟುಗಳಿಗೆ ರಾಜ್ಯ/ ರಾಷ್ಟ್ರ ಮಟ್ಟದಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗುವುದು.

ಉ) ಹೌದು. ರಾಜ್ಯ/ ರಾಷ್ಟ್ರ ಮಟ್ಟದಲ್ಲಿ ನಡೆದ ಕ್ರೀಡಾ ಕೂಟಗಳಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಜಿಲ್ಲಾ ಮಟ್ಟದಲ್ಲಿ ಪ್ರೋತ್ಸಾಹ ನೀಡುತ್ತಿದ್ದು ಸಹಾಯಧನದ ಬಗ್ಗೆ ಕ್ಷೇತ್ರವಾರು, ತಾಲ್ಲೂಕುವಾರು ಮತ್ತು ವಾರ್ಡ್‌ವಾರು ವಿವರಗಳನ್ನು ವಿಂಗಡಿಸಲಾಗುವುದಿಲ್ಲ.

4826(5039) ಶ್ರೀ ಪಾಪರೆಡ್ಡಿ ಎ. (ರಾಯಚೂರು): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ತಾಲ್ಲೂಕಿನಲ್ಲಿ ನೂತನವಾಗಿ ಸ್ಥಾಪಿಸಲ್ಪಡುವ ವಿದ್ಯುತ್ ಸಬ್-ಸ್ಟೇಷನ್‌ಗಳು ಎಷ್ಟಿವೆ; ಅವು ಯಾವುವು;